# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.703/2012
ಸಿಡಬ್ಲ್ಯೂ.1 ಪಿಡಬ್ಲ್ಯೂ.2

ಸಾಕ್ಷಿಯ ಹೆಸರು - ಅಮೃತ ಬಸಯ್ಯಾ ಗುಡಿ
ವಯಸ್ಸು - 48 ವರ್ಷ
ಉದ್ಯೋಗ - ಅಬಕಾರಿ ನೀರಿಕ್ಷಕರು ಯು ಎಸ್ ಎಲ್ ಹುಬ್ಬಳ್ಳಿ
ವಾಸ - ಹುಬ್ಬಳ್ಳಿ

ದಿನಾಂಕಃ 29-05-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು ಮಾರ್ಚ 2010 ರಿಂದ ಡಿಸೆಂಬರ 2012 ರವರೆಗೆ ಗೋಕಾಕ ವಲಯ ನೀರಿಕ್ಷಕರಾಗಿ ಕೆಲಸ ಮಾಡಿದ್ದೇನೆ.

ದಿಃ14-12-2011 ರಂದು ರಾತ್ರಿ 8-30 ಗಂಟೆ ಸುಮಾರಿಗೆ ನಾನು ನನ್ನ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ಹಾಗು ಪಂಚರಾದ ಚಾಸಾ-2 ಮತ್ತು 3 ರವರು ಕೂಡಿಕೊಂಡು ಗೋಕಾಕ ತಾಲೂಕಿನ ನೆಲಗಂಟಿ ಕ್ರಾಸನಲ್ಲಿ ರಸ್ತೆಗಾವಲು ಮಾಡುತ್ತಿದ್ದಾಗ ಕಲಂ 54 ರ ಶೋಧನಾ ಸಮುಚ್ಚಿತ ವರದಿಯನ್ನು ತಯಾರಿಸಿಕೊಂಡೆನು. ನಂತರ ಆರೋಪಿಗಳಾದ ಭೀಮರಾಯಪ್ಪಾ ಸುಳಧಾಳ ಮತ್ತು ಕಲ್ಮೇಶ ಭೀಮರಾಯಪ್ಪಾ ಸುಳಧಾಳರವರು ಒಂದು ಕರಿಬಣ್ಣದ ದ್ವಿಚಕ್ರ ವಾಹನ ನಂ ಸಿಡಿ-100 ಕೆಎ-22 ಜೆ 7577 ನೇದ್ದರಲ್ಲಿ 04 ಕಳ್ಳಭಟ್ಟಿ ಸರಾಯಿ ತುಂಬಿದ ರಬ್ಬರ ಟ್ಯೂಬಗಳಲ್ಲಿ ಒಟ್ಟು 120 ಲೀಟರ ಕಳ್ಳಭಟ್ಟಿ ಸರಾಯಿ ಇದ್ದು ಸದರಿ ಟ್ಯೂಬಗಳಿಂದ 1x180 ಎಂಎಲನಂತೆ ಒಟ್ಟು 4x180 ಎಂಎಲನ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆ ಅಂತಾ ಸ್ಯಾಂಪಲ ತೆಗೆದು ಅವುಗಳಿಗೆ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಮುಚ್ಚಳಕ್ಕೆ ಅರಿವೆಯನ್ನು ಸುತ್ತಿ ದಾರದಿಂದ ಕಟ್ಟಿ ಅರಗನ್ನು ಹಚ್ಚಿ ಸರ್ಕಾರ ಶೀಲದಿಂದ ಶೀಲ ಮಾಡಲಾಯಿತು. ಸದರಿ ಆರೋಪಿಗಳನ್ನು ಮತ್ತು ಮುದ್ದೆಮಾಲುಗಳನ್ನು ಸದರಿ ಸ್ಥಳದಲ್ಲಿಯೇ ಪಂಚರ ಸಮಕ್ಷಮ ಜಪ್ತು ಮಾಡಿಕೊಂಡು ರಾತ್ರಿ 9-00 ಗಂಟೆಯಿಂದ 10-00 ರವರೆಗೆ ಸದರಿ ಮುದ್ದೆಮಾಲುಗಳನ್ನು ಜಪ್ತು ಮಾಡಿಕೊಂಡು ಸದರಿ ಸ್ಥಳದಲ್ಲಿಯೇ ವಾಹನದ ಲೈಟದ ಬೆಳಕಿನಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಮುದ್ದೆಮಾಲು ಮತ್ತು ಆರೋಪಿಗಳೊಂದಿಗೆ ಕಚೇರಿಗೆ ಬಂದು ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಪ್ರಕರಣದ ಕಡತವನ್ನು ತಯಾರಿಸಿ ಆರೋಪಿಗಳನ್ನು ಸದರಿ ದಿನದಂದು ಅಬಕಾರಿ ರಕ್ಷಕರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ15-12-2011 ರಂದು ಪ್ರಾಧಿಕೃತ ಅಧಿಕಾರಿಗಳು ಬೆಳಗಾವಿರವರಿಗೆ ಮುದ್ದೆಮಾಲುಗಳನ್ನು ತಾಬಾದಲ್ಲಿಟ್ಟುಕೊಳ್ಳಲು ಅನುಮತಿ ಕೋರಿ ಪತ್ರವನ್ನು ಬರೆದಿರುತ್ತೆನೆ. ನಂತರ ದಿಃ23-02-2012 ರಂದು ಸ್ಯಾಂಪಲಗಳನ್ನು ಚಾಸಾ-6 ರವರ ಮುಖಾಂತರ ಮುಖ್ಯ ರಾಸಾಯನಿಕ ವಿಶ್ಲೇಷಕರು ಬೆಂಗಳೂರುರವರಿಗೆ ಕಳುಹಿಸಿಕೊಟ್ಟೆನು. ದಿಃ25-02-2012 ಸದರಿ ರಕ್ಷಕರು ಸ್ಯಾಂಪಲ ಬಾಟಲಿ ಮತ್ತು ರಸಾಯನಿಕ ವಿಶ್ಲೇಷಣಾ ವರದಿಯನ್ನು ಮರಳಿ ತಂದು ಕಚೇರಿಗೆ ಸಲ್ಲಿಸಿದರು. ಸದರಿ ರಕ್ಷಕರ ಹೇಳಿಕೆಯನ್ನು ಪಡೆದೆನು. ದಿಃ12-01-2012 ರಂದು ಸದರಿ ಪ್ರಕರಣದಲ್ಲಿ ಜಪ್ತಾದ ವಾಹನ ಸಂಖ್ಯೆ ಕೆಎ-22 ಜೆ 7577 ರ ಮಾಲೀಕತ್ವದ ವಿವರ ನೀಡುವಂತೆ ಆರಟಿಓ ಬೆಳಗಾವಿರವರಿಗೆ ಪತ್ರವನ್ನು ಬರೆಯಲಾಯಿತು. ದಿಃ16-01-2012 ರಂದು ಆರಟಿಓ ಬೆಳಗಾವಿರವರು ವಾಹನದ ಮಾಲೀಕತ್ವದ ವಿವರದ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯಲ್ಲಿದ್ದ ವಾಹನದ ಮಾಲೀಕರು ರಮೇಶ ಕಲ್ಲಪ್ಪಾ ಕಡೋಳಕರ ಸಾಃ ಕಂಗರಾಳಿ ತಾಃ ಬೆಳಗಾವಿ ರವರನ್ನು 3 ನೇ ಆರೋಪಿ ಅಂತಾ ಪರಿಗಣಿಸಿ ದಾಳಿಯಲ್ಲಿ ಪಾಲ್ಗೊಂಡ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಪ್ರಕರಣದ ಸಂಪೂರ್ಣ ತನಿಖೆ ಮುಗಿದಿದ್ದರಿಂದ ಆರೋಪಿತರ ಮೇಲೆ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ.

ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) , ಪಿರ್ಯಾದಿಯನ್ನು ನಿಪಿ-2 , ಸಾಕ್ಷಿಯ ಸಹಿಯನ್ನು ನಿಪಿ-2(ಎ), ಪ್ರಥಮ ವರ್ತಮಾನ ವರದಿಯನ್ನು ನಿಪಿ-3 , ಸಾಕ್ಷಿಯ ಸಹಿಯನ್ನು ನಿಪಿ-3(ಎ), ರಾಸಾಯನಿಕ ಪರೀಕ್ಷಾ ವರದಿಯನ್ನು ಗುರುತಿಸಿದ್ದು ನಿಪಿ-4, ಶೋಧನಾ ಸಮುಚ್ಚಿತ ವರದಿಯನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ), ಆರಟಿಓ ಬೆಳಗಾವಿರವರಿಗೆ ಬರೆದ ಪತ್ರವನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ), ಆರಟಿಓ ಬೆಳಗಾವಿರವರಿಂದ ಪಡೆದ ಪತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು. ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೆನೆ. 4x180 ಎಂಎಲನ ಕಳ್ಳಭಟ್ಟಿ ಸರಾಯಿ ತುಂಬಿದ ಬಾಟಲಿಗಳನ್ನು ಒಟ್ಟಾಗಿ ಎಂ.ಓ-1 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ವ್ಯಕ್ತಿಗಳೇ ಆರೋಪಿತರಾಗಿರುತ್ತಾರೆ.

**<u>ಪಾಟೀ ಸವಾಲುಃ  ಆರೋಪಿ -3 ಪರ ವಕೀಲರಿಂದಃ</u>**

ಬಾತ್ಮಿ ಬಂದಾಗ ಎಲ್ಲಿ ಇದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ರಸ್ತೆಗಾವಲು ಮಾಡುತ್ತಿದ್ದಾಗ ಪ್ರಕರಣ ಪತ್ತೆಯಾಗಿರುತ್ತದೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ದ್ವಿಚಕ್ರ ವಾಹನದ ಮೇಲೆ ಕಳ್ಳಭಟ್ಟಿ ಸರಾಯಿ ಸಾಗಾಣಿಕೆ ಆಗುತ್ತಿದೆ ಅಂತಾ ಖಚಿತ ಬಾತ್ಮಿ ಇದ್ದು ಎಂದು ಬರೆಸಿದ್ದು ಸುಳ್ಳು ಎಂದರೆ ಸರಿಯಲ್ಲ.  ದಿಃ14-12-2011 ರಂದು ಕಚೇರಿಯನ್ನು ಸಂಜೆ 6-30 ಗಂಟೆಗೆ ಬಿಟ್ಟಿದ್ದೆನು. ಘಟನಾ ಸ್ಥಳಕ್ಕೆ 8-30 ಗಂಟೆಗೆ ಹೋದೆವು. ಸದರಿ ದಿನ 4-5 ವಾಹನಗಳನ್ನು ತಪಾಸನೆ ಮಾಡಿರುತ್ತೆನೆ. ನಮ್ಮ ಕಚೇರಿಯ ರಸ್ತೆಗಾವಲು ರೇಜಿಸ್ಟರದಲ್ಲಿ ವಾಹನಗಳನ್ನು ತಪಾಸನೆ ಮಾಡಿದ ಬಗ್ಗೆ ನಮೂದಿಸಿರುತ್ತೆನೆ. ಸದರಿ ಪ್ರತಿಯನ್ನು ಈ ಪ್ರಕರಣದ ಅಂತಿಮ ವರದಿಯ ಜೊತೆ ಸಲ್ಲಿಸಿರುವುದಿಲ್ಲ. ಅದನ್ನು ಸಲ್ಲಿಸಲು ಯಾವುದೇ ಅಡಚಣೆ ಇರುವುದಿಲ್ಲ. ಘಟನಾ ಸ್ಥಳ ಮುಖ್ಯ ರಸ್ತೆಗೆ ಅಂಟಿಕೊಂಡಿದೆ ಎಂದರೆ ಸರಿ. ಅಲ್ಲಿ ಒಂದೇ ರಸ್ತೆ ಇದೆ. ಅಲ್ಲಿ 04 ರಸ್ತೆಗಳು ಕೂಡಿವೆ ಎಂದರೆ ಸರಿಯಲ್ಲ. ಅಲ್ಲಿ ಬಸನಿಲ್ದಾಣ ಇದೆ ಎಂದರೆ ಸರಿ. ರಸ್ತೆಯ ಅಕ್ಕಪಕ್ಕದಲ್ಲಿ ಪಾನ ಅಂಗಡಿ , ಚಹಾ ಅಂಗಡಿ ಇವೆ ಎಂದರೆ ಸರಿ. ಅಲ್ಲಿ ಜನಸಂದಣಿ ಇದೆ ಎಂದರೆ ರಾತ್ರಿಯ ಹೊತ್ತಿನಲ್ಲಿ ಇರಲಿಲ್ಲ. ಅಲ್ಲಿ ರಾತ್ರಿ 9-30 ರಿಂದ 10-30 ರವರೆಗೆ ಜನರು ಓಡಾಡುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ನಾವು ತೆಗೆದುಕೊಂಡ ವಾಹನದ ಸಂಖ್ಯೆಯನ್ನು ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ನಮೂದಿಸಿದ್ದೆನೆ ಎಂದು ನುಡಿಯುತ್ತಾರೆ. ನಾನು ಯಾವ ಸಾಕ್ಷಿದಾರರನ್ನು, ಪಂಚರನ್ನು  ಕರೆದುಕೊಂಡು ಹೋಗಿದ್ದೆನು ಎಂದು ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ನಮೂದಿಸಿದ್ದೆನೆ ಎಂದು ನುಡಿಯುತ್ತಾರೆ. ಅಂತಿಮ ವರದಿಯಲ್ಲಿ ಪಂಚರ ಹೆಸರುಗಳನ್ನು ಬೇರೆ ಶಾಹಿಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಾನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಪತ್ರದಲ್ಲಿ ಇನವರ್ಡ ನಂಬರ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಪಡೆದ ಸಾಕ್ಷಿದಾರರ ಹೇಳಿಕೆಯಲ್ಲಿ ಪಡೆದವರ ಸಹಿ ಇಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಜಪ್ತುಪಡಿಸಿದ ವಾಹನವು ಆರೋಪಿಗೆ ಸಂಬಂಧಿಸಿದ್ದು ಎಂದು ಆರೋಪಿತರ ಹೇಳಿಕೆ ಪಡೆದಿರುವುದಿಲ್ಲ. ನಾನು ಆರೋಪಿತರನ್ನು ವಿಚಾರಿಸಿದಾಗ ಅವರು ಸಹಕಾರ ನೀಡಿರುವುದಿಲ್ಲ ಮತ್ತು

ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಈ ವಿಷಯವನ್ನು ಅಂತಿಮ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ನಿಪಿ-7 ರ ಆಧಾರದ ಮೇಲೆ 3 ನೇ ಆರೋಪಿಯ ಹೆಸರನ್ನು ಸೇರಿಸಲಾಗಿದೆ ಎಂದರೆ ಸರಿ. 3 ನೇ ಆರೋಪಿಯು ದಿಃ17-5-2005 ರಂದು ನಾಗಶಾಂತಿ ಮೋಟರ ಸರ್ವಿಸರವರಿಗೆ ತನ್ನ ವಾಹನವನ್ನು ಮಾರಾಟ ಮಾಡಿದ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 3 ನೇ ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರದೇ ಇದ್ದರೂ ಅವನ ಹೆಸರನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಠಾಣೆಯ ಅಂಕಿ ಸಂಖ್ಯೆ ತೋರಿಸಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮುದ್ದೆಮಾಲಿಗೂ ಹಾಗು ವಾಹನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ **-1** ಮತ್ತು **2** ಪರ ವಕೀಲರಿಂದಃ</u>

ಗೋಕಾಕದಿಂದ ಅಂಕಲಗಿಗೆ ಹೋಗಲು 2 ಗಂಟೆ ಬೇಕು ಎಂದರೆ ಸರಿ. ಮಧ್ಯ ಬರುವ ಕಡಬಗಟ್ಟಿ ಕನಸಗೇರಿ ಉರಬಗಟ್ಟಿಗಳಲ್ಲಿ ಅರ್ಧ ಗಂಟೆ ಪೆಟ್ರೋಲಿಂಗ್ ಮಾಡಿ ಹೋಗಿರುತ್ತಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ಘಟನೆ ನಡೆದ ದಿನ ಬೇಗ ಹೋಗಿರುತ್ತೆವೆ ಎಂದು ನುಡಿಯುತ್ತಾರೆ. ಘಟನೆ ನಡೆದ ದಿನ ನಮಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸಾಕ್ಷಿಯು ಸದರಿ ಸ್ಥಳದಲ್ಲಿ ಮೇಲಿಂದ ಮೇಲೆ ಪ್ರಕರಣಗಳು ಪತ್ತೆಯಾಗುತ್ತವೆ ಎಂಬ ಮಾಹಿತಿ ಇದ್ದ ಕಾರಣ ಅಲ್ಲಿಗೆ ಹೋಗಿದ್ದೆನು. ಅಂಕಲಗಿಗೆ ಹೋದ ನಂತರ ಸರ್ಚ ವಾರೆಂಟ ತಯಾರಿಸಿರುತ್ತೆನೆ. ನಾನು ಅಂಕಲಗಿಯಲ್ಲಿದ್ದಾಗ ಮಾಹಿತಿ ಬಂದಿಲ್ಲ. ಅಂಕಲಗಿಯಿಂದ ನೆಲಗಂಟಿ ಕ್ರಾಸ ಸುಮಾರು 10 ಕಿ.ಮೀ ಆಗಬಹುದು. ನಿಪಿ-5 ರಲ್ಲಿ ಸ್ಥಳ ನೆಲಗಂಟಿ ಕ್ರಾಸ ಬರೆದಿದೆ ಎಂದರೆ ಸರಿ. ಆರೋಪಿಗಳು ಬೆಳಗಾವಿ ಕಡೆಯಿಂದ ಬಂದರು ಯಾವ ದಿಕ್ಕು ಗೊತ್ತಿಲ್ಲ. ಘಟನೆ ಸ್ಥಳದಲ್ಲಿ ಬೆಳಗಾವ ಕಡೆಯಿಂದ ಬರುವ 02 ರಸ್ತೆಗಳಿದ್ದು ಆರೋಪಿತರು ಯಾವ ರಸ್ತೆ ಕಡೆಯಿಂದ ಬಂದರು ಎಂದರೆ ಸಾಕ್ಷಿಯು ಬೆಳಗಾವಿ ಕಡೆಯಿಂದ ಬಂದರು ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಘಟನಾ ಸ್ಥಳ ಚೆಕಬಂದಿ ನಮೂದಿಸಿಲ್ಲ ಎಂದರೆ ಸರಿ. ನಾನು ಜಪ್ತು ಮಾಡಿದ ವಾಹನಕ್ಕೂ ಆರೋಪಿತರಿಗೂ ಯಾವ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ದೊರೆತ ಕಳ್ಳಭಟ್ಟಿ ಸರಾಯಿಯನ್ನು ಮಾಪನದಿಂದ ಅಳತೆಯಿಂದ ಅಳೆದಿರುವುದಿಲ್ಲ ಅಜಮಾಸ್ ಬರೆದಿರುತ್ತೆನೆ. ರಾತ್ರಿ 8-30 ಗಂಟೆಗೆ ಕತ್ತಲು ಇರುತ್ತದೆ ಎಂದರೆ ಸಾಕ್ಷಿಯು ಗಾಡಿಯ ಹೆಡಲೈಟ ಬೆಳಕು ಇತ್ತು ಎಂದು ನುಡಿಯುತ್ತಾರೆ. ಪಂಚರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪರೀಕ್ಷೆಗೆ ಯಾವುದೇ ಮಾದರಿ ಕಳಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯಲ್ಲಿ ತಾರೀಖು ಮತ್ತು ಸಮಯ ನಮೂದಿಸಿಲ್ಲ ಎಂದರೆ ಸರಿ. ನಾನು ಸಾಕ್ಷಿದಾರರ

ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಪಂಚನಾಮೆ ಮಾಡಿಲ್ಲ, ಪಂಚರನ್ನು ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಅಂಗವೀಕಲ ಎಂದರೆ ಸರಿಯಲ್ಲ. ಆರೋಪಿತರಿಗೆ ಗಾಡಿ ಹೊಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿರುವ ಅನಕ್ಲೇಮಡ ಪ್ರಾಪರ್ಟಿಯನ್ನು ಈ ಪ್ರಕರಣದಲ್ಲಿ ಅಳವಡಿಸಿ ಆರೋಪಿತರ ವಿರುದ್ಧ ರಾಜಕೀಯದವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.